MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 9-9-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಹೆಚ್ಚುತ್ತಿರುವ ದಾಸ್ತಾನು ಹಾಗೂ ಚೀನಾದಿಂದ ಬೇಡಿಕೆ ಇಳಿಕೆಯ ಹಿನ್ನಲೆಯಲ್ಲಿ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 4 ಶೇಕಡಾ ಇಳಿಕೆಯಾಗಿ 6 ವಾರಗಳ ಹಿಂದಿನ ಕನಿಷ್ಠ ಮಟ್ಟ ತಲುಪಿದೆ. ಹಿಂದಿನ 4 ತಿಂಗಳುಗಳಿಂದ ಪಾಮೆಣ್ಣೆ ದರ 40 ಶೇಕಡಾ ಕುಸಿತವಾಗಿದೆಯೆನ್ನಲಾಗಿದೆ. ಇಂಡೋನೇಶಿಯಾ ತನ್ನ ದಾಸ್ತಾನು ಕಡಿತಗೊಳಿಸಲು ಪ್ರಯತ್ನ ಪೂರ್ವಕ ರಫ್ತು ಹೆಚ್ಚಳಗೊಳಿಸುತ್ತಿದ್ದು, ಮಲೇಶಿಯಾದಲ್ಲೂ ಪೂರೈಕೆ ಹೆಚ್ಚಳವಾಗುತ್ತಿರುವುದರಿಂದ ದರ ಇಳಿಕೆಯಾಗುತ್ತಿದೆ. ಸೋಯಾಬೀನ್ ಎಣ್ಣೆ ಚಿಕಾಗೋ ದರ 2 ಶೇಕಡಾ ಇಳಿಕೆಯಾಗಿದ್ದು, ಚೈನಾದಲ್ಲಿ ಕೋವಿಡ್ ನಿರ್ಬಂಧಗಳು ಕೆಲವು ಪ್ರದೇಶಗಳಲ್ಲಿ ಮುಂದುವರಿಯುತ್ತಿರುವುದರಿಂದ ಅಲ್ಲಿಂದ ಪಾಮೆಣ್ಣೆ ಬೇಡಿಕೆ ಇಳಿಕೆಯಾಗಿದೆಯೆನ್ನಲಾಗಿದೆ.

## ಹೆಚ್ಚುತ್ತಿರುವ ಬೇಡಿಕೆಯಿಂದ ಜೋಳ ಉತ್ಪಾದನೆ ಹೆಚ್ಚಳವಾದರೂ ಪೂರೈಕೆಗಿಂತ ಬಳಕೆಯ ವೇಗ ಹೆಚ್ಚಳ

ಭಾರತದಲ್ಲಿ ಜೋಳದ ಬೇಡಿಕೆ ಶೀಘ್ರ ಹೆಚ್ಚಳವಾಗುತ್ತಿದ್ದು, ಉತ್ಪಾದನೆಯೂ ಹೆಚ್ಚಳವಾಗುತ್ತಿದೆ. ಆದರೆ ಉತ್ಪಾದನೆಗಿಂತ ಬಳಕೆಯ ವೇಗ ಹೆಚ್ಚಳವಿದ್ದು ಪೂರೈಕೆಗೆ ಸಾಕಾಗುತ್ತಿಲ್ಲ. ದೇಶೀ ಉತ್ಪಾದನೆಯ 80 ಶೇಕಡಾ ಕೈಗಾರಿಕಾ ಬಳಕೆಯಾಗುತ್ತಿದ್ದು, ಇದರಲ್ಲಿ 50 ಶೇಕಡಾ ಫೀಡ್ಸ್‌ಗಳಿಗೆ ಬಳಕೆಯಾಗುತ್ತಿದೆ. 2020 ರಲ್ಲಿ ಭಾರತದ ಜೋಳ ಬಳಕೆ 27.6 ಮಿಲಿಯನ್ ಟನ್‌ಗಳಾಗಿದ್ದು 2030 ರಲ್ಲಿ 33.8 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆ. ರಫ್ತು ಬೇಡಿಕೆಯೂ ಉತ್ತಮವಾಗಿದ್ದು, ಈ ವರ್ಷ ಹೆಚ್ಚಳವಾಗಿದ್ದು, ಇನ್ನೂ ಹೆಚ್ಚಳಗೊಂಡಲ್ಲಿ ದೇಶೀ ಬಳಕೆಗೆ ಜೋಳ ಸಾಕಷ್ಟು ಸಿಗಲಾರದೆನ್ನಲಾಗಿದೆ.

## ಮಲೇಶಿಯಾದ ಪಾಮೆಣ್ಣೆ ಉತ್ಪಾದನೆ 2022 ರಲ್ಲೂ ಇಳಿಕೆ

ಮಲೇಶಿಯಾದ ಪಾಮೆಣ್ಣೆ ಉತ್ಪಾದನೆ 2022, ಸತತ ಮೂರನೇ ವರ್ಷ ಇಳಿಕೆಯಾಗಲಿದೆಯಾಗಲಿದೆಯೆನ್ನಲಾಗಿದೆ. ಅಥವಾ ಹಿಂದಿನ ವರ್ಷದ ಉತ್ಪಾದನೆ 18.1 ಮಿಲಿಯನ್ ಟನ್‌ಗಳಷ್ಟೇ ಇರಬಹುದೆಂದು ಅಲ್ಲಿನ ಪ್ಲಾಂಟರ್‌ಗಳು ನಿರೀಕ್ಷಿಸಿತುತ್ತಾರೆನ್ನಲಾಗಿದೆ. ಕೂಲಿಯವರ ಅಭಾವದಿಂದ ಪಾಮ್ ಕಾಯಿಗಳನ್ನು ಕೊಯ್ದು ಸಂಗ್ರಹಿಸುವವರಲ್ಲದೆ, ಕೆಲವು ಪ್ಲಾಂಟೇಶನ್‌ಗಳಲ್ಲಿ ಪಾಮ್ ಹಣ್ಣುಗಳು ಕೊಳೆಯುತ್ತಿವೆಯೆನ್ನಲಾಗಿದೆ. ಕೋವಿಡ್ ಆರಂಭದಲ್ಲಿ ವಲಸೆ ಕಾರ್ಮಿಕರು ಹೊರಹೋದ ನಂತರ ನಿರಂತರ ಮೂರನೇ ವರ್ಷ ಕಾರ್ಮಿಕರ ಅಭಾವದಿಂದ ಪಾಮೆಣ್ಣೆ ಉತ್ಪಾದನೆಗೆ ಹಿನ್ನಡೆಯಾಗುತ್ತಿದೆಯೆನ್ನಲಾಗಿದೆ. ಕಾರ್ಮಿಕ ಲಭ್ಯತೆ ಹೆಚ್ಚಳವಾದಲ್ಲಿ ಉತ್ಪಾದನೆ ಹೆಚ್ಚಳವಾಗಬಹುದು.

## ರಿಯಾಯತಿ ದರದಲ್ಲಿ ಕೇಂದ್ರದಿಂದ ರಾಜ್ಯಗಳಿಗೆ ಬೇಳೆಕಾಳು ಬಿಡುಗಡೆ

ಕೇಂದ್ರ ಸರಕಾರದ ದಾಸ್ತಾನಿನಿಂದ ರಾಜ್ಯಗಳಿಗೆ ರಿಯಾಯತಿ ದರದಲ್ಲಿ ಬೇಳೇಕಾಳು ಬಿಡುಗಡೆ ಮಾಡಲಿದೆಯೆನ್ನಲಾಗಿದೆ. ಇದನ್ನು ವಿವಿಧ ಸಾರ್ವಜನಿಕ ವಿತರಣಾ ಯೋಜನೆಗಳಿಗೆ ಉಪಯೋಗಿಸಬಹುದೆನ್ನಲಾಗಿದ್ದು ಮುಖ್ಯವಾಗಿ ಕಡಲೆ ಬಿಡುಗಡೆಯಾಗಲಿದೆಯೆನ್ನಲಾಗಿದೆ. ಹಿಂದಿನ 3 ವರ್ಷಗಳಲ್ಲಿ ದೇಶದ ಕಡಲೆ ಉತ್ಪಾದನೆ ಸತತ ಹೆಚ್ಚಳವಾಗಿತ್ತನ್ನಲಾಗಿದೆ. ಇದರಿಂದ ಹಿಂದಿನ ವರ್ಷದ ಬೆಂಬಲ ಬೆಲೆ ಮೂಲಕ ಖರೀದಿಸಿದ ದಾಸ್ತಾನು ಕೇಂದ್ರದ ಬಳಿ 30.55 ಲಕ್ಷ ಟನ್‌ಗಳಿವೆಯೆನ್ನಲಾಗಿದೆ.

## ಸಕ್ಕರೆ ಜಾಗತಿಕ ಉತ್ಪಾದನೆ ಹೆಚ್ಚಳ

ಹಿಂದಿನ 2021 ರ ಅಕ್ಟೋಬರ್ ನಂತರ ಸಕ್ಕರೆ ದರ ಇಳಿಕೆಯಾಗಿದ್ದು, ಪ್ರಸ್ತುತ ದರ ಏರಿಕೆಯಾಗಿದ್ದರೂ ಹಿಂದಿನ ದರ ಹೆಚ್ಚಳಕ್ಕಿಂತ ಕಡಿಮೆಯಾಗಿದೆ. ಆಹಾರ ಮತ್ತು ಕೃಷಿ ಸಂಸ್ಥೆ ಅಂದಾಜಿನಂತೆ 2022 ರ ಜಾಗತಿಕ ಸಕ್ಕರೆ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ. ಭಾರತ, ಥೈಲಾಂಡ್‌ಗಳಲ್ಲಿ ಉತ್ಪಾದನೆ ಹೆಚ್ಚಳವಾಗಲಿದೆಯೆನ್ನಲಾಗಿದೆ.